ತೆಗೆಯುವುದರಿಂದ ನೀರು ಭೂಮಿಯೊಳಗೆ ಪರ್‌ಕ್ಯುಲೇಟ್ ಆಗುವುದಿಲ್ಲ. ಪಕ್ಕದಲ್ಲಿರುವ ಬಾವಿಗಳಲ್ಲಿ ನೀರು ಬರುವುದಿಲ್ಲ, ಇಂತಹ ಅಪಾಯವನ್ನು ರೈತರು ಅನುಭವಿಸುತ್ತಿದ್ದಾರೆ. ಎರಡನೆಯದಾಗಿ, ಕೆಲವು ಪುಡಾರಿಗಳು ಹುಟ್ಟಿಕೊಂಡು ಒಂದು ಲಾರಿಗೆ 10 ರಿಂದ 20 ರೂಪಾಯಿ ವಸೂಲು ಮಾಡಿಕೊಳ್ಳುತ್ತಿದ್ದಾರೆ. ಲಾರಿಯವರು ದುಡ್ಡು ಕೊಡುವುದಿಲ್ಲ ಎಂದಾಗ ಫೈಟಿಂಗ್ ನಡೆದಿದೆ. ದಯವಿಟ್ಟು ತಾವು ಏನಾದರೂ ಮಾಡಿ ಇದನ್ನು ರೆಗ್ಯುಲರೈಸ್ ಮಾಡಿ, ಈ ಪುಡಾರಿಗಳು ಹಣ ತಿನ್ನುವುದನ್ನು ತಪ್ಪಿಸಿ, ಇಲ್ಲವೇ ನೇರವಾಗಿ ಸರ್ಕಾರಕ್ಕೆ ಹಣ ಬರಲಿ. ಮರಳು ಎತ್ತಲೇ ಬೇಕಾಗುತ್ತದೆ. ಇಲ್ಲವೆಂದರೆ ನಮ್ಮ ನಾಯಕರು ಹೇಳಿದ ಹಾಗೆ ಎಲ್ಲ ಡೆವಲಪ್‌ಮೆಂಟ್ ವರ್ಕ್ ನಿಂತು ಹೋಗುತ್ತದೆ. ಆದ್ದರಿಂದ ದಯಮಾಡಿ ಈ ಪುಡಾರಿಗಳ ಕಾಟ ತಪ್ಪಿಸಿ ನೇರವಾಗಿ ಸರ್ಕಾರಕ್ಕೆ ಹಣ ಬರುವಂತೆ ಏನಾದರೂ ವ್ಯವಸ್ಥೆ ಮಾಡಿಕೊಳ್ಳುತ್ತೀರ. ಅದರ ಬಗ್ಗೆ ಆರ್ಟಿಕಲ್ ಬಂದಿರುವ ಈ ಪೇಪರ್ ತಮಗೆ ಕಳುಹಿಸಿಕೊಡುತ್ತಾ ಇದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಸದಸ್ಯರು ಹೇಳಿದ ವಿಷಯವನ್ನು ಗಮನಿಸಿ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆ.

**ಬೊಮ್ಮನಹಳ್ಳಿಯಲ್ಲಿರುವ ಅರಣ್ಯ ಭೂಮಿಯ ವಿಸ್ತೀರ್ಣ**

616 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ.

*ಅ) ನೆಲಮಂಗಲ ತಾಲ್ಲೂಕು ಬೊಮ್ಮನಹಳ್ಳಿ ಅರಣ್ಯಕ್ಕೆ ಸೇರಿದ ಭೂ ವಿಸ್ತೀರ್ಣವೆಷ್ಟು?*

*ಆ) ನಿರುಪಯುಕ್ತವಾಗಿರುವ ಆ ಜಾಗದಲ್ಲಿ ಒಂದು ಕೈಗಾರಿಕಾ ಕೇಂದ್ರವನ್ನ ಮಾಡಿದರೆ ಸ್ಥಳೀಯ ನಿರುದ್ಯೋಗಿಗಳಿಗೆ ಉದ್ಯೋಗ ಅವಕಾಶ ದೊರೆಯಲು ಅನುಕೂಲವಾಗುವುದೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಇ) ಹಾಗಿದ್ದಲ್ಲಿ, ಸರ್ಕಾರವು ಕೈಗೊಂಡ ಕ್ರಮಗಳೇನು?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) 161 ಎಕರೆ 9 ಗುಂಟೆ. (64.76 ಹೆಕ್ಟೇರ್)

ಆ) ಈ ಪ್ರದೇಶವನ್ನು ರಾಜ್ಯ ಅರಣ್ಯ ಎಂದು 1932ರಲ್ಲಿ ಘೋಷಿಸಿಲಾಗಿದೆ. ಈ ಅರಣ್ಯ ಪ್ರದೇಶದಲ್ಲಿ ನೀಲಗಿರಿ ನೆಡುತೋಪು ಇರುತ್ತದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಅಂಜನಮೂರ್ತಿ : ಮಾನ್ಯ ಉಪಾಧ್ಯಕ್ಷೆಯವರೇ, ಈ ಬೊಮ್ಮನಹಳ್ಳಿ ಅರಣ್ಯ ಪ್ರದೇಶ ನೆಲಮಂಗಲ ಟೌನ್‌ಗೆ ಅತೀ ಸಮೀಪದಲ್ಲಿ ಇದ್ದು ರಾಷ್ಟ್ರೀಯ ಹೆದ್ದಾರಿ 4ರ ಪಕ್ಕದಲ್ಲಿರತಕ್ಕಂತ ಪ್ರದೇಶ. ಇಲ್ಲಿ 161 ಎಕರೆ ಜಮೀನು ಇದೆ. ತಮ್ಮ ಮುಖಾಂತರ ಸಚಿವರನ್ನು ಕೇಳುತ್ತಿದ್ದೇನೆ. ಅಲ್ಲಿ ಬೆಲೆ ಬಾಳತಕ್ಕ ಮರಗಳು ಅಂದರೆ ತೇಗ, ಹೊನ್ನೆ ಮತ್ತಿ ಇನ್ನೂ ಅನೇಕ ಬೆಲೆ ಬಾಳತಕ್ಕ ಮರಗಳು ಇವೆಯೇ? ಎರಡನೆಯದಾಗಿ ಆ ಅರಣ್ಯದಲ್ಲಿ ವನ್ಯ ಮೃಗಗಳು ಅಂದರೆ ಜಿಂಕೆ, ಸಿಂಹ, ಚಿರತ್ ಮುಂತಾದ ಪ್ರಾಣಿಗಳು ಇವೆಯೇ ಎಂದು ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಸನ್ಮಾನ್ಯ ಅಧ್ಯಕ್ಷಣಿಯವರೇ, ಈ ಒಂದು ಅರಣ್ಯವನ್ನು 1932ರಲ್ಲಿ ರಾಜ್ಯ ಅರಣ್ಯ ಎಂದು ಘೋಷಿಸಲಾಗಿದೆ. ಆದಕಾರಣ ಅದನ್ನು ಬೇರೆ ಯಾವುದಕ್ಕಾದರೂ ಉಪಯೋಗ ಮಾಡುವುದಾದರೆ ನಾವು ಸೆಂಟ್ರಲ್ ಗೌರ್ನಮೆಂಟ್‌ನ ಅನುಮತಿ ಕೊಡಲೆಬೇಕಾಗುತ್ತದೆ. ಅದಲ್ಲದೆ ಇದುವರೆಗೆ ಯಾವ ಒಂದು ಇಂಡಸ್ಟ್ರಿಯಲ್ ಎಸ್ಟೇಟ್ ಮಾಡುವುದಕ್ಕೆ ಮನವಿ ಬರಲಿಲ್ಲ. ಮನವಿ ಬಂದಿದ್ದರೆ ಇದನ್ನು ಪರಿಶೀಲನೆ ಮಾಡಬಹುದಾಗಿತ್ತು.

ಶ್ರೀ ಆಂಜನಮೂರ್ತಿ : ಮಾನ್ಯ ಉಪಾಧ್ಯಕ್ಷಣಿಯವರೇ, ಉತ್ತರದಲ್ಲಿ ಕೊಟ್ಟಿರುವ ಪ್ರಕಾರ ಆ 161 ಎಕರೆಗಳಲ್ಲಿ ನೀಲಗಿರಿ ಮರಗಳು ಬೆಳೆಯುತ್ತಿವೆ ಎಂದು ಹೇಳುತ್ತಿದ್ದಾರೆ. ತಮಗೆ ಗೊತ್ತಿರುವ ಹಾಗೆ ಆ ನೀಲಗಿರಿ ಮರಗಳನ್ನು ಹಳ್ಳಿಗಾಡಿನಲ್ಲಿ ಜನರು ಕಳವು ಮಾಡತಕ್ಕಂಥಾದ್ದು ನಡೆಯುತ್ತಿದೆ. ಮಾನ್ಯ ಸಚಿವರು ಇಂಡಸ್ಟ್ರಿಯಲ್ ಎಸ್ಟೇಟ್ ಮಾಡುವುದಕ್ಕೆ ಯಾವ ಮನವಿ ಬಂದಿಲ್ಲ ಎಂದು ಹೇಳಿದರು. ನಾನು ಭಾವಿಸುತ್ತೇನೆ. ಅದು ಸತ್ಯಕ್ಕೆ ದೂರವಾದುದು. ಇದರ ಬಗ್ಗೆ ನಾನು ಅನೇಕ ಮನವಿಗಳನ್ನು ಸಹಾ ಸಲ್ಲಿಸಿದ್ದೇನೆ. ಈ ವಿಚಾರದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶವನ್ನು ನಮಗೆ ಬಿಡುಗಡೆ ಮಾಡಿಕೊಡಿ, ಅಲ್ಲಿ ಕೈಗಾರಿಕಾ ಘಟಕಗಳನ್ನು ಕಟ್ಟುತ್ತೇವೆಂದು ಕೇಳಿದ್ದಾರೆ. ಅದು ಸರ್ಕಾರದ ಗಮನದಲ್ಲಿದೆ. ಅಲ್ಲಿ ಕೈಗಾರಿಕಾ ಶೆಡ್ಡುಗಳನ್ನು ನಿರ್ಮಿಸಿದರೆ ನಿರುದ್ಯೋಗ ಸಮಸ್ಯೆ ಬಗೆಸರಿಸಲಿಕ್ಕೆ ಸಾಕಷ್ಟು ಉಪಯೋಗವಾಗುತ್ತದೆ. ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಯೋ ಎಂದು ನಾನು ತಮ್ಮ ಮೂಲಕ ಮನವಿ ಮಾಡುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಸನ್ಮಾನ್ಯ ಉಪಾಧ್ಯಕ್ಷಣಿಯವರೆ, ಅಲ್ಲಿ ಇಂಡಸ್ಟ್ರಿಯಲ್ ಎಸ್ಟೇಟ್ ಸ್ಥಾಪಿಸಿದರೆ ನಿರುದ್ಯೋಗ ಕಡಿಮೆ ಆಗುತ್ತದೆ ಎಂದು ಹೇಳುವ ವಿಷಯದಲ್ಲಿ ನಮ್ಮ ಭಿನ್ನಾಭಿಪ್ರಾಯ ಇಲ್ಲ. ಆದರೆ ತಹಸೀಲ್ದಾರ್‌ಗೆ ಮನವಿ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಅದು ಇಷ್ಟರವರೆಗೆ ಅರಣ್ಯ ಇಲಾಖೆಗೆ ಬರಲಿಲ್ಲ. ಅಲ್ಲಿ ಸಿ ಅಂಡ್ ಡಿ ಲ್ಯಾಂಡ್ಸ್ ಹಾಗೂ ರೆವಿನ್ಯೂ ಲ್ಯಾಂಡ್ಸ್ ಇದೆ. ಅದನ್ನು ನೋಡಿ ಅದರಲ್ಲಿ ಸಹಾ ಈ ಒಂದು ಇಂಡಸ್ಟ್ರೀಯಲ್ ಸೆಂಟರ್ ಮಾಡಿಸಬಹುದು.

ಶ್ರೀ ಆಂಜನಮೂರ್ತಿ : ತಾವು ಕೇಂದ್ರ ಸರ್ಕಾರದ ಅನುಮತಿ ಪಡೆದು ಇಂಡಸ್ಟ್ರಿಯಲ್ ಏಸ್ಟೇಟ್ ಮಾಡಿ. ಈ ನಿರುದ್ಯೋಗ ಸಮಸ್ಯೆ ಬಗೆಹರಿಸುವುದಕ್ಕೆ ಸರ್ಕಾರ ಉಚಿತವಾದ ತೀರ್ಮಾನ ಕೈಗೊಳ್ಳುತ್ತದೆಯೇ ಎಂಬ ಪ್ರಶ್ನೆ ಕೇಳುತ್ತೇನೆ.

ಶ್ರೀ ಬ್ಲೇಸಿಯನ್ ಎಂ. ಡಿಸೋಜ : ಮಾನ್ಯ ಅಧ್ಯಕ್ಷಣಿಯವರೆ, ಯಾವ ಮನವಿ ಬಂದಿದೆ ಅದನ್ನು ಪರಿಶೀಲನೆ ಮಾಡುತ್ತೇನೆ.

**ಕೆ.ಇ.ಬಿ.ಯಲ್ಲಿ ಖಾಲಿ ಇರುವ ಹುದ್ದೆಗಳು**

181 - ಶ್ರೀ ಕೆ. ಲಕ್ಷ್ಮಣ್ಣ (ರಾಜಾಜೀನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

*ಅ) ಕರ್ನಾಟಕ ವಿದ್ಯುತ್ ಮಂಡಳಿಯಲ್ಲಿ ಅಸಿಸ್ಟೆಂಟ್ ಇಂಜಿನಿಯರ್, ಜ್ಯೂನಿಯರ್ ಇಂಜಿನಿಯರ್ ಮೋಟರ್ ರೀಡರ್ ಹುದ್ದೆಗಳಿಗೆ ನೇಮಕಾತಿ ಮಾಡಿಕೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*